ಹಣವನ್ನು ವಸೂಲ್ಮಾಡುತ್ತಿದ್ದಾರೆ ಅಷ್ಟೇ ಅಲ್ಲ ಈ ಟ್ರಕ್ ಓನರ್ಸ್ ಏನು ಇದ್ದಾರೆ ಅವರನ್ನೂ ಬಿಡದೆ ಹಣ ಕೊಡಿರಿ ಎಂದು ವಸೂಲ್ಮಾಡುತ್ತಿದ್ದಾರೆ. ಅವರು ಹಣ ಕೊಟ್ಟರೆ ಸರಿ ಇಲ್ಲದೇ ಹೋದರೆ ಅವರ ಟ್ರಕ್ ಅನ್ನು ಸೀಜ್ ಮಾಡುತ್ತಾರೆ. ಹೀಗೆ ಮಾಡಿ ಅವರು ಲಕ್ಷಾಂತರ ರೂಪಾಯಿ ಹಣ ವಸೂಲಿ ಮಾಡುವ ಕೆಲಸ ನಡೆದಿದೆ. ಈ ಒಂದು ಕೆಲಸ ನಮ್ಮ ಜಿಲ್ಲೆಯು ಒಂದುಲ್ಲೇ ನಡೆದಿಲ್ಲ, ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯೂ ನಡೆಯುತ್ತಾ ಇದೆ. ನಾನು ಇಡೀ ರಾಜ್ಯದ ಪ್ರಶ್ನೆಯನ್ನು ಈ ವಿಚಾರದಲ್ಲಿ ವಿತಕ್ಕೆ ಕೇಳಲಿಲ್ಲ ಎಂದರೆ ತಾವು ಇಂತಹ ಪ್ರಶ್ನೆಯನ್ನು ಸ್ಟಾರ್ಡ್ ಪ್ರಶ್ನೆ ಇರುವುದನ್ನು ಅನ್‌ಸ್ಟಾರ್ಡ್ ಪ್ರಶ್ನೆಯನ್ನಾಗಿ ಮಾಡಿಬಿಡುತ್ತೀರಿ, ಆದ್ದರಿಂದ ನನ್ನ ಜಿಲ್ಲೆಮಟ್ಟಿಗೆ ಈ ಪ್ರಶ್ನೆಯನ್ನು ಹಾಕಿದೆ. ತಾವು ನನ್ನ ಪ್ರಶ್ನೆ (ಅ) ಗೆ ಉತ್ತರವಾಗಿ ಇದರಿಂದ ಒಟ್ಟು ೧೫,೧೨,೦೭೦-೦೦ ರೂ. ವಸೂಲಾಗಿದೆ ಅಂತ ಹೇಳಿದ್ದೀರಿ. ನನಗೆ ತಿಳಿದ ಮಟ್ಟಿಗೆ ಇವರು ಸಂಗ್ರಹ ಮಾಡಿದ ಒಟ್ಟು ಹಣ ಸುಮಾರು ೩೦ ರಿಂದ ೩೨ ಲಕ್ಷ ರೂಪಾಯಿನವರೆಗೆ ಸಂಗ್ರಹವಾಗಿದೆ. ಇವರು ಯಾವ ರೀತಿ ಹಣ ವಸೂಲ್ಮಾಡುತ್ತಾರೆ ಎನ್ನುವುದನ್ನು ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಮುಧೋಳ್ ತಾಲ್ಲೂಕಿನಲ್ಲಿ ಮಹಾಲಿಂಗಪ್ಪ ಅವರು ಎಕ್ಸ್ ಪ್ರೆಸಿಡೆಂಟ್ ಅವರ ಹತ್ತಿರ ಇವರು ಹೋಗಿ ೧೦ ಸಾವಿರ ರೂಪಾಯಿ ಕೇಳಿದರು. ಅವರು ಈ ಸಾರಿ ಬರಗಾಲ ಇದೆ, ಆದುದರಿಂದ ನಾನು ಇದಕ್ಕೆ ೨ ಸಾವಿರ ರೂಪಾಯಿ ಕೊಡುತ್ತೇನೆ, ಮಯ್ಯಿರಿ, ನಾನು ೧೦ ಸಾವಿರ ರೂಪಾಯಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಅದಕ್ಕೆ ಈ ಪೋಲೀಸಿನವರು ಏನು ಮಾಡಿದರು ಎಂದರೆ ಅವರ ಹತ್ತಿರ ಇದ್ದಂಥಾ ರಿವಾಲ್ವಾರ್ ಅನ್ನು ಜಪ್ತಿ ಮಾಡಿ ತೊಂದರೆ ಕೊಟ್ಟರು. ಈ ಪೋಲೀಸ್ ಅಧಿಕಾರಿಗಳೇ ಹೋಗಿ ಹೀಗೆ ಮಾಡಿದ್ದಾರೆ. ಹಾಗೆಯೇ ಜಮಖಂಡಿ ತಾಲ್ಲೂಕಿನಲ್ಲೂ ನಡೆದಿದೆ. ನಿಮ್ಮ ಪಕ್ಷದ ಶಾಸಕರಿಗೆ ಈ ವಿಚಾರ ಗೊತ್ತಿದ್ದರೂ ಸಹ ಇಂತಹ ಪ್ರಶ್ನೆಯನ್ನು ಕೇಳುವುದಿಲ್ಲ ಎಂದು ಹೇಳುತ್ತಾರೆ ಅವರೇ ಈ ಪ್ರಶ್ನೆಯನ್ನು ನೀವೇ ಹಾಕಿ ಎಂದು ನಮ್ಮ ಮುಂದೆ ಬಂದು ಹೇಳಿದ್ದಾರೆ. ಆದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೀನಿ. ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುವುದು ಇಷ್ಟೆ ಇದರ ಬಗ್ಗೆ ಏನಾದರೂ ಎಕ್‌ಕ್ವೈರಿ ಮಾಡಿಸುತ್ತೀರಾ ಹೇಗೆ ?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಯಾವುದಾದರೂ ನಿರ್ದಿಷ್ಟವಾಗಿರತಕ್ಕಂಥಾ ಉದಾಹರಣೆಗಳನ್ನು ಕೊಟ್ಟರೆ ಅವುಗಳನ್ನು ವಿಚಾರಣೆಮಾಡಿಸುತ್ತೇನೆ, ಅಷ್ಟೇ ಅಲ್ಲ ಅದನ್ನು ವಿಜಿಲೆನ್ಸ್ ಕಮೀಷನ್‌ಗೂ ಕಳಿಸಿಕೊಡುತ್ತೇನೆ.

ರಾಜ್ಯದಲ್ಲಿ ವೈದ್ಯಕೀಯ ವಿಜ್ಞಾನದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ

೬೦೮. ಶ್ರೀಮತಿ ಮುಂಕ್ತರುನ್ನಿಸ (ನರಸಿಂಹರಾಜ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ) ರಾಜ್ಯದಲ್ಲಿ ವೈದ್ಯಕೀಯ ವಿಜ್ಞಾನಗಳ ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸಲು ದಿನಾಂಕ ೨೧-೧೧-೮೧ ರಂದು ನಡೆದ ಹಿಂದಿನ ಸಚಿವ ಸಂಪುಟದ ಸಭೆಯಲ್ಲಿ ತಿರ್ಮಾನ ಕೈಗೊಂಡಿರುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಆ) ಹಾಗಿದ್ದರೆ ಈ ದಿಶೆಯಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಈ ವಿಶ್ವ ವಿದ್ಯಾನಿಲಯವನ್ನು ಯಾವಾಗ ಸ್ಥಾಪಿಸಲಾಗುವುದು.

ಈ) ಈ ಉದ್ದೇಶಕ್ಕಾಗಿ ಎಷ್ಟು ಹಣ ಮೀಸಲಿಡಲಾಗಿದೆ.

ಡಾ. ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆ.

ಆ) ಈ ವಿಷಯವು ಪರಿಶೀಲನೆಯಲ್ಲಿದೆ.

ಇ) ಈ ಹಂತದಲ್ಲಿ ಯಾವುದೇ ನಿರ್ದಿಷ್ಟ ಉತ್ತರ ಹೇಳಲು ಸಾಧ್ಯವಿರುವುದಿಲ್ಲ.

ಈ) ಇಲ್ಲಿಯವರೆಗೆ ಇದಕ್ಕಾಗಿ ಹಣವನ್ನು ಮೀಸಲಿಟ್ಟಿಲ್ಲ.

SMT. MUKTHARUNNISA.—Sir, to my question (a) they have said 'Government is aware of the proposal in this regard'. Secondly, the answer is the matter is under consideration – that means they know this case but answering my question (b) the Government has said no amount has been earmarked so far and further said it is not possible to give any specific reply at this stage. I would like to know from the Hon'ble Minister as to how many medical colleges are there in Karnataka ? Since when the proposal to set up all university of medical Science in the State is pending and what is the policy of the Government in regard to opening of new medical collages and when the Government proposes to set up an University of Medical Sciences in the State as there is a need for a separate University for Medical Education.

ಶ್ರೀ ಎಚ್. ಎಲ್. ತಿಮ್ಮೇಗೌಡ.—ರಾಜ್ಯದಲ್ಲಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪಿಸುವ ವಿಷಯ ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ಹೇಳಿದ್ದರೂ ಸಹ ಈಗ ಪ್ರಾರಂಭ ಮಾಡವುದಕ್ಕೆ ಸಾಧ್ಯವಾಗಿಲ್ಲ. ಈ ವಿಶ್ವವಿದ್ಯಾನಿಲಯ ಆಗಬೇಕು ಎಂದು ನಿರ್ಣಯವಾಗಿದೆ ಇಲ್ಲಿಯವರೆಗೆ ಏತಕ್ಕೆ ನಿಧಾನವಾಗಿದೆಯೆಂದರೆ, ಯುಜಿಸಿ ಇದ್ದಹಾಗೆ ಇದಕ್ಕೆ ಹಣಕಾಸನ್ನು ಕೊಡುವುದಕ್ಕೋಸ್ಕರ ಬೇರೆ ಸಂಸ್ಥೆ ಇಲ್ಲ. ಕೇಂದ್ರ ಸರ್ಕಾರದವರು ಈ ವಿಶ್ವವಿದ್ಯಾನಿಲಯವನ್ನು ನಿಧಾನಮಾಡಿ ನಾವು ಪರಿಶೀಲನೆ ಮಾಡುತ್ತೇವೆ ಆಮೇಲೆ ಯೋಚನೆ ಮಾಡಿ ಎಂದು ಹೇಳಿದ್ದಾರೆ. ಆದುದರಿಂದ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಒಂದು ಕಮಿಟಿ ಮಾಡಿದ್ದೇವೆ, ಅದರಲ್ಲಿ ಇಟ್ಟುಕೊಂಡಿದ್ದೇವೆ, ಕೇಂದ್ರ ಸರ್ಕಾರದಿಂದ ನಮಗೆ ಕ್ಲಿಯರೆನ್ಸ್ ಬಂದ ತಕ್ಷಣ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

SMT. MUKTHARUNNISA BEGUM.—You are permitting new medical colleges. When that is the case, why are you delaying in the matter of establishment of a Medical University ? I learn that it is still under consideration by the Government. Why you have not earmarked any amount for the establishment of a Medical University ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಇದಕ್ಕೆ ಉತ್ತರ ಹೇಳಿದ್ದೇನೆ. ಹೊಸದಾಗಿ ಮೆಡಿಕಲ್ ಕಾಲೇಜನ್ನು ಸ್ಥಾಪನೆ ಮಾಡತಕ್ಕಂಥ ಪ್ರಶ್ನೆ ನಮ್ಮ ಮುಂದಿಲ್ಲ ಎಂದು. ಮೆಡಿಕಲ್ ಕಾಲೇಜನ್ನು ಕೊಡುವುದಕ್ಕೂ, ಯೂನಿವರ್ಸಿಟಿ ಸ್ಥಾಪನೆಗೂ ಸಂಬಂಧವಿಲ್ಲ. ಇದೇ ಬೇರೆ ಪ್ರಶ್ನೆ, ಅದೇ ಬೇರೆ ಪ್ರಶ್ನೆ.

ಜಿಲ್ಲಾ ಶುಶ್ರೂಷಕ ಮೇಲ್ವಿಚಾರಕರ ಪುನರ್ದೇಶ ವರ್ತನ

ಡಿಕ್ಕಿರ ಶ್ರೀ ಗೋಪಾಲ ಮುಂಕುಂದ ಕಾನಡೆ (ಸಿರ್ಸಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಂಗಳೂರು ಶುಶ್ರೂಷಾ ಮಹಾವಿದ್ಯಾಲಯದಲ್ಲಿ ಸಾರ್ವಜನಿಕ ಆರೋಗ್ಯ ಇಲಾಖೆಯ ಜಿಲ್ಲಾ ಶುಶ್ರೂಷಕ ಮೇಲ್ವಿಚಾರಕರು (ಡಿ. ಎನ್. ಎಸ್.) ಕಾರ್ಯನಿರ್ವಹಿಸುತ್ತಿರುವುದು ನಿಜವೇ ? ಹಾಗಿದ್ದಲ್ಲಿ ಅವರು ಎಷ್ಟು ವರ್ಷಗಳಿಂದ ಅಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ?

ಆ) ಸಾರ್ವಜನಿಕ ಆರೋಗ್ಯ ಇಲಾಖೆಯಿಂದ ಮೇಲ್ಕಂಡ ಶುಶ್ರೂಷಕ ಕಾಲೇಜಿಗೆ ತೆಗೆದುಕೊಂಡಿರಲು ಕಾರಣಗಳೇನು ಹಾಗೂ ಈ ಮಹಾವಿದ್ಯಾಲಯದಲ್ಲಿ ಅರ್ಹ ಅಭ್ಯರ್ಥಿಗಳಿಲ್ಲದಿದ್ದರೂ ಅವರನ್ನು ಮುಂದುವರಿಸಲು ಕಾರಣಗಳೇನು ?